Chief Minister at The inter-State Meeting

313. Sri H. N. NANJE GOWDA (Arakalgud).—

Will the Chief Minister be pleased to State :—

(*a*) whether the Chief Minister attended the 'inter-State Meeting' to discuss matters pertaining to projects in Cauvery basin sometime during August, 1968 ;

(*b*) whether the Chief Minister committed himself either orally or in writing or did anything to create an impression on the Government of India and the Tamil Nadu (Madras) Government that he would faithfully implement the 1924 Agreement on Cauvery waters ?

Sri VEERENDRA PATIL (Chief Minister).—

(*a*) and (*b*) The Chief Minister attended the Meeting in August 1968 and no commitment was made.

ಶ್ರೀ ಎಚ್. ಎನ್. ನಂಜೇಗೌಡ.—ತಾವು ಹಿಂದಿನಲಿಗೆ ಚರ್ಚೆಗೆ ಹೋದಾಗ ಹೇಮಾವತಿಗೆ ಕ್ಲಿಯರೆನ್ಸ್ ಕೊಡಬೇಕಾದರೆ ಒಂದು ಅಗ್ರಿಮೆಂಟಿಗೆ ನೀವು ಒಪ್ಪಿಕೊಂಡು, ಕೇಂದ್ರ ಸರ್ಕಾರದವರಾಗಲಿ ಮದ್ರಾಸ್ ಸರ್ಕಾರದವರಾಗಲಿ ರೂಲ್ಸ್ ಆಫ್ ರೆಗ್ಯುಲೇಷನ್ ಬದಲಾಗಬೇಕೆಂದು ಹೇಳಿದರಾ ಆಗ ನಿಮ್ಮ ನಿಲುವು ಏನು ?

† ಶ್ರೀ ವೀರೇಂದ್ರ ಪಾಟೀಲ್.—ಆಗಸ್ಟ್ 1968ರಲ್ಲಿ ಮೀಟಿಂಗ್ ಆಗಿದೆ. ಆ ಮೀಟಿಂಗ್‌ನಲ್ಲಿ ಚರ್ಚೆಯಾಯಿತು, ಅದಕ್ಕೆ ಮೊದಲು ಅಧಿಕಾರಿಗಳ ಜೊತೆಯಲ್ಲಿ ಚರ್ಚೆಯಾಗಿದೆ. ನಾವು ಹೋದದ್ದು ಹೇಮಾವತಿ ಕ್ಲಿಯರೆನ್ಸ್ ಸಲುವಾಗಿ. 45 ಟಿಎಂಸಿ ಇದರೊಳಗೆ ಬರುತ್ತದೆ, ಇದನ್ನು ಉಪಯೋಗ ಮಾಡಿಕೊಳ್ಳುವ ಅಧಿಕಾರ ನಮಗೆ ಇದೆ ಎಂದು ವಾದ ಮಾಡಿದ್ದೇವೆ. ಮದ್ರಾಸಿನವರು ತಮಗೆ ನೀರು ಬರುವುದಕ್ಕೆ ಅಫೆಕ್ಟ್ ಆಗದ ಹಾಗೆ ತಮ್ಮ ಲಿಮಿಟ್ ಫ್ಲೋಸ್ ಅಫೆಕ್ಟ್ ಆಗದ ಹಾಗೆ ಒಂದು ವೇಳೆ ನಾವು ಮಾಡಿಕೊಳ್ಳುತ್ತಾ ಇದ್ದರೆ ಮಾಡಿಕೊಳ್ಳಬಹುದು ಅಂತ ಅವರ ನಿಲುವು ಇತ್ತು. ಇಬ್ಬರೂ ಚರ್ಚೆ ಮಾಡಿ ಅನಂತರ ಕೇಂದ್ರ ಸರ್ಕಾರದವರು ನಿರ್ಣಯ ಮಾಡಿ ನಮಗೆ ನಿರ್ಣಯ ಕಳುಹಿಸಿ ಕೊಡಿ ಎಂದು ಹೇಳಿದ್ದೇವೆ. ಇಲ್ಲಿಯವರೆಗೂ ಆ ನಿರ್ಣಯ ಬಂದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಆಗಸ್ಟ್ 1968ರ ಸಭೆ ನಡೆಯುತಲಾ ಆ ಮೀಟಿಂಗಿನ ಪ್ರೊಸೀಡಿಂಗ್ಸ್ ರೆಕಾರ್ಡ್ ಆಗಿದೆಯೇ ? ಆ ಪ್ರೊಸೀಡಿಂಗ್ಸ್ ಕಾಪಿ ರಾಜ್ಯ ಸರ್ಕಾರಕ್ಕೆ ತಲುಪಿದೆಯೇ ? ತಲುಪಿದ್ದರೆ ಖಾನಗಿಯಾಗಿ ಆಗಲಿ ಅಥವಾ ಸಭೆಯ ಮುಂದೆ ಆಗಲಿ ಇಟ್ಟು ನಮಗೆ ತಿಳಿಸುವುದಕ್ಕೆ ಆಗುತ್ತದೆಯೇ ?

ಶ್ರೀ ವೀರೇಂದ್ರ ಪಾಟೀರ್.—ನನಗೆ ಗೊತ್ತಿದ್ದ ಹಾಗೆ ಮೀಟಿಂಗ್ ಪ್ರೊಸೀಡಿಂಗ್ಸ್ ಯಾವುದೂ ಡ್ರಾಫ್ಟ್ ಆಗಿಲ್ಲ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಪತ್ರಿಕೆಗಳಲ್ಲಿ ವರದಿಯಾಗಿರುವಂತೆ ಈಗಿರುವಂತಹ ರೀತಿಯಲ್ಲಿಯೇ ಹೇಮಾವತಿ ಕಟ್ಟಿದರೂ ಕೂಡ ನೀರನ್ನು ಬಿಟ್ಟುಕೊಡುವಂತಹ ಧೋರಣೆಯನ್ನು ಮದ್ರಾಸಿನ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದೀರಿ ಎಂದು ವರದಿಯಾಗಿದೆ ಇದು ಸತ್ಯವೇ ಇಲ್ಲವೇ ?

ಶ್ರೀ ವೀರೇಂದ್ರ ಪಾಟೀರ್.—ಯಾವ ಪತ್ರಿಕೆಯಲ್ಲಿ ವರದಿಯಾಗಿದೆಯೋ ಗೊತ್ತಿಲ್ಲ. ಪತ್ರಿಕೆಯ ವರದಿಯ ಮೇಲೆ ಪ್ರಶ್ನೆಗಳನ್ನು ಕೇಳಿದರೆ ಉತ್ತರ ಹೇಳುವುದು ಬಹಳ ಕಷ್ಟವಾಗುತ್ತದೆ. ನಾವು ಏನು ನಿಲುವು ತೆಗೆದುಕೊಂಡಿದ್ದೇವೆ ಎಂಬುದು ವಿರೋಧ ಪಕ್ಷದ ಅನೇಕ ನಾಯಕರಿಗೆ ಗೊತ್ತಿದೆ. ಲಿಮಿಟ್ ಫ್ಲೋಸ್ ಯಾವಾಗಲೂ ಗ್ಯಾರಂಟಿ ಮಾಡುತ್ತೇವೆ ಎಂದು ಲಿಖಿತವಾಗಿ ಬರೆದಿಲ್ಲ ಅಥವಾ ಒಪ್ಪಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಈ ಸಭೆಯಲ್ಲಿ ಯಾವಾಗಲಾದರೂ 1924ನೆಯ ಅಗ್ರಿಮೆಂಟಿಗೆ ಒಪ್ಪಿ ನೀವು ಹೇಳಿರತಕ್ಕ ರೀತಿಯಿಂದ ಆ ರೆಗ್ಯುಲೇಷನ್ ಪ್ರಕಾರವೇ ನಾವು ಮಾಡುತ್ತೇವೆ. ಹೇಮಾವತಿಗೆ ನಮಗೆ ಕ್ಲಿಯರೆನ್ಸ್ ಕೊಡಿ ಎಂದು ಕೇಳಿದ್ದೀರಾ ? ಇದು ಒಂದನೆಯದು. ಎರಡನೆಯದು:—1968ರಲ್ಲಿ ತಾವು ಚರ್ಚೆ ಮಾಡುವ ಕಾಲದಲ್ಲಿ ಲಿಮಿಟ್ ಪ್ಲೋಸ್‌ಗೆ ನೀವು ಒಪ್ಪಿ ರೂಲ್ಸ್ ಆಫ್ ರೆಗ್ಯುಲೇಷನ್ ಬದಲಾವಣೆ ಮಾಡದೆ ಹೇಮಾವತಿ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ನಮಗೆ ಪರ್ಮಿಷನ್ ಕೊಡಿ ಎಂದು ಕೇಳಿದಿರಾ ? ಮೂರನೆಯದು:—ಲಿಮಿಟ್ ಪ್ಲೋಸ್‌ಗೆ ನೀವು ಒಪ್ಪಿ, ಬದ್ದರಾಗಿ ಹೇಮಾವತಿಯನ್ನು ನಿಮ್ಮ ಇಚ್ಛೆಯಂತೆ 22 ಟಿ.ಎಂ.ಸಿ. ಗನುಗುಣವಾಗಿ ಮಾಡಬೇಕೆಂದು ಇದ್ದರೆ, ಅದನ್ನು ಕಟ್ಟುವುದಕ್ಕೆ ಸಾಧ್ಯವೇ ? ಈ ಮೂರಕ್ಕೂ ಸ್ಪಷ್ಟವಾಗಿ ನಮಗೆ ತಿಳಿಯುವಂತೆ ತಾವು ಉತ್ತರ ಕೊಡಬೇಕೆಂದು ನಮ್ಮ ಕೋರಿಕೆ.

ಶ್ರೀ ವೀರೇಂದ್ರ ಪಾಟೀಲ್.—ಉತ್ತರ ಕೊಡಬಹುದು. ಆದರೆ ಚನ್ನಬಸಪ್ಪನವರಿಗೆ ತಿಳಿಯುವ ಹಾಗೆ ಉತ್ತರ ಕೊಡುವ ಶಕ್ತಿ ನನಗಿಲ್ಲ, ಎಷ್ಟು ವಿವರವಾಗಿ ಉತ್ತರ ಕೊಟ್ಟರೂ ಅವರಿಗೆ ತಿಳಿಯುವ ಹಾಗಿಲ್ಲ, ಅದು ನನಗೆ ಗೊತ್ತಿದೆ. ಈಗ ಒಂದನೆಯ ಪ್ರಶ್ನೆಗೆ ಸಂಬಂಧಪಟ್ಟಂತೆ ಈ ಮಾನ್ಯ ಸಭೆಯಲ್ಲಿ ಅನೇಕ ಸಲ ಭಾಷಣ ಮಾಡಿದ್ದೇನೆ. ಯಾವಾಗ ಏನು ಹೇಳಿದೆ ಎಂಬುದು ಈಗ ಜ್ಞಾಪಕ ವಿಲ್ಲ. ನಾನು ಹೇಳಿರುವುದನ್ನು ಪ್ರೊಸೀಡಿಂಗ್ಸ್‌ನಲ್ಲಿ ನೋಡಬಹುದು. ಎರಡನೆಯದು ಆಗಸ್ಟ್ 1968ರಲ್ಲಿ ಚರ್ಚೆಯಾಗಿರುವುದು—ಅದನ್ನು ಈಗಾಗಲೇ ಹೇಳಿದ್ದೇನೆ. ತಪಸೀಲು ಈಗ ಕೇಳಿದರೆ ನನ್ನ ಬಳಿ ಪ್ರೊಸೀಡಿಂಗ್ಸ್ ಇಲ್ಲ, 1968ರಲ್ಲಿ ಚರ್ಚೆಯಾಗಿರುವುದನ್ನು ಈ ದಿವಸ ಹೇಳುವುದಕ್ಕೆ ಸಾಧ್ಯವಿಲ್ಲ. ಮೂರನೆಯದು ಪ್ಲೋ ಲಿಮಿಟ್ಟಿನ ವಿಚಾರ ಪರಿಶೀಲಿಸಲಾಗುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನದೊಂದು ಕ್ರಿಯಾರೋಪವಿದೆ. ಪ್ರಶ್ನೋತ್ತರಗಳ ಕಾಲ ಮುಗಿದಮೇಲೆ ಅದನ್ನು ಕೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಮದ್ರಾಸಿನವರು 3-4 ದೊಡ್ಡ ನೀರಾವರಿ ಯೋಜನೆ ಮಾಡಿದಾಗ ನಮ್ಮ ರಾಜ್ಯ ಸರಕಾರದವರನ್ನು ಕೇಳಿಯೆ ಮಾಡಿದ್ದಾರೆ. ಇದಕ್ಕೆ ನಮ್ಮ ಸರ್ಕಾರದವರು ಕೇಂದ್ರ ಸರಕಾರದಲ್ಲಿ ಅಬ್ಜೆಕ್ಷನ್ ಹಾಕಿದ್ದಾರೆಯೇ ? ಹಾಕಿಲ್ಲದಿದ್ದರೆ ಅಗ್ರಿಮೆಂಟಿನೊಳಗೆ ಬಾರದಿರುವುದಿದ್ದರೆ ಏಕೆ ಅಬ್ಜೆಕ್ಷನ್ ಹಾಕಲಿಲ್ಲ ?

ಶ್ರೀ ವೀರೇಂದ್ರ ಪಾಟೀಲ್.—ಮದ್ರಾಸಿನವರು ಮುಂದೆ ಮಾಡುವ ಪ್ರಾಜೆಕ್ಟುಗಳ ಬಗ್ಗೆ ಇನ್‌ಫರ್ಮೇಷನ್ ನನ್ನಲ್ಲಿ ಇಲ್ಲ. ಅದನ್ನು ಹೇಳಲು ಸಾಧ್ಯವಿಲ್ಲ.

Land available for distribution to landless peasants

344. Sri M. S. KRISHNAN (Malleswaram).—

Will the Minister for Revenue be pleased to state:—

(*a*) the number of acre of land, belonging to the Government, that is available for distribution to the landless peasants in the State (districtwise figures may be given);

(*b*) the number of acres of land distributed since the last three years to the landless as well as to the agricultural workers (yearwar and districtwise figures may be given);

(*c*) whether it has come to the notice of Government that only a negligible portion of the agricultural workers have been granted land by the Government, if so, the steps the Government intends to take or is taking to see that land is distributed to the landless and in particular the agricultural workers;